<u>ದಿನಾಂಕ 14-09-2023 ರಂದು ಸಾಕ್ಷಿಧಾರರನ್ನು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.</u>

<u>ಅರ್ಜಿಗಳ ಮೇಲಿನ ಆದೇಶದಂತೆ ಮುಂದುವರೆದ ಪಾಟೀ ಸವಾಲು 1 ರಿಂದ 3 ನೇ ಪ್ರತಿವಾದಿಯರ ಪರ ಶ್ರೀ.ಐ ಕೆ ಹೆಚ್ ವಕೀಲರಿಂದ :</u>

ದಾವೆ ದಾಖಲಿಸಲು ಕಾರಣ ನಾಲ್ಕು ವರ್ಷಗಳ ಹಿಂದೆ ಉಂಟಾಗಿದೆ. ತಾರೀಖು ಈಗ ಹೇಳಲಾಗುವುದಿಲ್ಲ. ನನ್ನ ಮತ್ತು ನನ್ನ ಸಹೋದರಿಯರ ಮದುವೆಗೆ 1 ರಿಂದ 3 ನೇ ಪ್ರತಿವಾದಿಯರು ಸುಮಾರು 40 ಲಕ್ಷ ಖರ್ಚು ಮಾಡಿದ್ದಾರೆ ಎಂದರೆ ಸರಿಯಲ್ಲ. ದಾವಾ ಬಿ ಶೆಡ್ಯೂಲನ 5 ಮತ್ತು 6 ನೇ ಆಸ್ತಿಗಳಾದ ವಿ ಪಿ ಸಿ ನಂ.236 ಮತ್ತು 237/ಎ ಈಗ ಯಾರ ಹೆಸರಿನಲ್ಲಿದೆ ಎಂದು ಗೊತ್ತಿಲ್ಲ. ಸದರಿ ಆಸ್ತಿಗಳನ್ನು ನಮ್ಮೆಲ್ಲರ ಒಪ್ಪಿಗೆ ಮೇರೆಗೆ 1 ರಿಂದ 3 ನೇ ಪ್ರತಿವಾದಿಯರ ಹೆಸರಿನಲ್ಲಿ ಮಾಡಲಾಗಿದೆ ಎಂದರೆ ಸರಿಯಲ್ಲ. ಆ ಪ್ರಕಾರ ಹೀರೂರು ಗ್ರಾಮ ಪಂಚಾಯತಿಯಲ್ಲಿ ಠರಾವು ಸಂಖ್ಯೆ 10 ನಮೂದಾಗಿದೆ ಎಂದರೆ ಸರಿಯಲ್ಲ. 1988 ರಲ್ಲಿ ನನ್ನ ತಂದೆ ತೀರಿಕೊಂಡಿದ್ದಾರೆ. ನನ್ನ ತಂದೆ ತೀರಿಕೊಂಡ 12 ವರ್ಷದ ಒಳಗೆ ದಾವೆ ಮಾಡಲು ಏನು ತೊಂದರೆ ಇತ್ತು ಎಂದರೆ ಗೊತ್ತಿಲ್ಲ.

2. ನನ್ನ ತಂದೆಯ ಮರಣಾನಾಂತರ ನನ್ನ ತಾಯಿ ನಮ್ಮೆಲ್ಲರ ಅ.ಸ. ದಾರ ನಾತೆಯಿಂದ 1 ರಿಂದ 3 ನೇ ಪ್ರತಿವಾದಿಯರ ಹೆಸರನ್ನು ದಾಖಲೆಯಲ್ಲಿ ಹಚ್ಚಿರುವುದು ಗೊತ್ತಿದ್ದರೂ ಸಹ ಗೊತ್ತಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಡ ನಂ. 3113 ಮಂಜೂರಾಗಿ 30 ವರ್ಷಗಳಾಗಿವೆ ಎಂದರೆ ಗೊತ್ತಿಲ್ಲ. 2 ನೇ ಪ್ರತಿವಾದಿ ದಾವಾ ಬಿ ಶೆಡ್ಯೂಲನ 4 ನೇ ಆಸ್ತಿಯನ್ನು 4 ನೇ ಪ್ರತಿವಾದಿಗೆ ಮಾರಾಟ ಮಾಡಿದ್ದಾರೆ ಎಂದರೆ ಗೊತ್ತಿಲ್ಲ. ಅವರು ಮಾರಾಟ ಮಾಡುವ ಕಾಲಕ್ಕೆ ನಾನು ಉಪ ನೋಂದಣಾಧಿಕಾರಿಗಳ ಕವೇರಿಗೆ ಹೋಗಿ ತಕರಾರು ಮಾಡಿಲ್ಲ. 4 ನೇ ಪ್ರತಿವಾದಿಯ ಹೆಸರು ಮಾರಾಟ ಮಾಡಿದ ಜಮೀನಿನಲ್ಲಿ ನಮೂದಿಸುವ ಕಾಲಕ್ಕೆ ತಹಶೀಲ್ದಾರರ ಕಚೇರಿಗೆ ನಾನು ತಕರಾರು ಸಲ್ಲಿಸಿಲ್ಲ. ಡ ನಂ.3113 ನ್ನು ರದ್ದು ಮಾಡುವಂತೆ ಕಂದಾಯ ನ್ಯಾಯಾಲಯದಲ್ಲಿ ಅರ್ಜಿ ಹಾಕಿಲ್ಲ. ಠರಾವು ಸಂಖ್ಯೆ 10 ನ್ನು ತಾಲೂಕು ಪಂಚಾಯತಿಯಲ್ಲಿ ಪ್ರಶ್ನೆ ಮಾಡಿದ್ದೀರಾ ಎಂದರೆ ಇಲ್ಲ. ನನ್ನ ಮತ್ತು ನನ್ನ ಸಹೋದರಿಯರ ಮದುವೆಯ ಖರ್ಚು ವೆಚ್ಚಗಳನ್ನು ಹಾಗೂ ಬಾಣಂತಿ ಖರ್ಚು ವೆಚ್ಚಗಳನ್ನು ಇಲ್ಲಿಯವರೆಗೂ 1 ರಿಂದ 3 ನೇ ಪ್ರತಿವಾದಿಯರೇ ನಿಭಾಯಿಸಿದ್ದಾರೆ ಎಂದರೆ ಸರಿಯಲ್ಲ. ನಮ್ಮ ತಾಯಿ ಹೇಳಿದ

ರೀತಿಯಲ್ಲಿ 1 ರಿಂದ 3 ನೇ ಪ್ರತಿವಾದಿಯರು ಕೇಳುತ್ತಿದ್ದರು ಎಂದರೆ ಸರಿಯಲ್ಲ. ನಮ್ಮ ತಾಯಿಯ ಮರಣಾನಂತರ 1 ರಿಂದ 3 ನೇ ಪ್ರತಿವಾದಿಯರಿಗೆ ತೊಂದರೆ ಕೊಡುವ ಸಲುವಾಗಿ ಸುಳ್ಳು ವ್ಯಾಜ್ಯ ಕಾರಣ ತೋರಿಸಿ ಸುಳ್ಳು ದಾವೆ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ಡ ನಂ.3113 ರ ಪ್ರಕಾರ ದಾವಾ ಬಿ ಶೆಡ್ಯೂಲನ 1 ರಿಂದ 4 ನೇ ಜಮೀನುಗಳ ಸಂಪೂರ್ಣ ಮಾಲೀಕರು 1 ರಿಂದ 3 ನೇ ಪ್ರತಿವಾದಿಯರು ಎಂದರೆ ಸರಿಯಲ್ಲ. 1 ರಿಂದ 3 ನೇ ಪ್ರತಿವಾದಿಯರು ಆಸ್ತಿಗಳನ್ನು ತಮ್ಮೊಳಗೆ ಹಿಸ್ಸೆ ಮಾಡಿಕೊಂಡು ಎಮ್ ಆರ್ ಹೆಚ್ 18/2019-2020 ಮಂಜೂರಾಗಿದ್ದು ಆ ಬಗ್ಗೆ ನನಗೆ ಸಂಪೂರ್ಣ ಮಾಹಿತಿ ಇದೆ ಎಂದರೆ ಸರಿಯಲ್ಲ. ಸದರಿ ಎಮ್ ಆರ್ ಪ್ರಕಾರ ದಾವಾ ಬಿ ಶೆಡ್ಯೂಲನ 1 ನೇ ಆಸ್ತಿ 3 ನೇ ಪ್ರತಿವಾದಿಗೆ, ದಾವಾ ಬಿ ಶೆಡ್ಯೂಲನ 2 ನೇ ಆಸ್ತಿ 2 ನೇ ಪ್ರತಿವಾದಿಗೆ, ದಾವಾ ಬಿ ಶೆಡ್ಯೂಲ್ 3 ನೇ ಆಸ್ತಿ 1 ನೇ ಪ್ರತಿವಾದಿಗೆ ಮತ್ತು ದಾವಾ ಬಿ ಶೆಡ್ಯೂಲನ 4 ನೇ ಆಸ್ತಿ 2 ನೇ ಪ್ರತಿವಾದಿಯರ ಹಿಸ್ಸೆಗೆ ಹೋಗಿದೆ ಎಂದರೆ ಸರಿಯಲ್ಲ. ಇಲ್ಲಿಯವರೆಗೂ ನಾನು ಮತ್ತು ನನ್ನ ಸಹೋದರಿಯರು 1 ರಿಂದ 3 ನೇ ಪ್ರತಿವಾದಿಯರೊಂದಿಗೆ ಚೆನ್ನಾಗಿ ಮಾತನಾಡುತ್ತಾ ಎಲ್ಲಾ ವಿಷಯಗಳ ಬಗ್ಗೆ ಸಂಪೂರ್ಣ ಅರಿವು ಇದೆ ಎಂದರೆ ಸರಿಯಲ್ಲ. 30 ವರ್ಷಗಳ ನಂತರ ದಾವೆ ಮಾಡಿರುವುದರಿಂದ ಕಾಲ ಪರಿಮಿತಿಯೊಳಗೆ ಬರುವುದಿಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿಗಳು ಇಂದಿಗೂ ಕೂಡ 1 ರಿಂದ 3 ನೇ ಪ್ರತಿವಾದಿಯರ ಮಾಲೀಕತ್ವ ಕಬಜಾ ವಹಿವಾಟಿಯಲ್ಲಿ ಇವೆ ಎಂದರೆ ಸರಿಯಲ್ಲ. ನಾನು ಎಂದೂ ಕೂಡ ಹೀರೂರು ಗ್ರಾಮದಲ್ಲಿ ವಾಸ ಇಲ್ಲ ಎಂದರೆ ಸರಿ. 1 ರಿಂದ 3 ನೇ ಪ್ರತಿವಾದಿಯರ ಘರಾಣೆಗೆ ಸಂಬಂಧಿಸಿದಂತೆ ನಾನು ವಾರಸುದಾರಳಲ್ಲ ಎಂದರೆ ಸರಿಯಲ್ಲ. ನನ್ನ ವಾರಸು ಹಕ್ಕು 30 ವರ್ಷಗಳ ಹಿಂದೆ ಮೊಟಕುಗೊಂಡಿದೆ ಎಂದರೆ ಸರಿಯಲ್ಲ.

3. 3 ನೇ ಪ್ರತಿವಾದಿ ದಾವಾ ಆಸ್ತಿಗಳ ಪೈಕಿ ಕೆಲವು ಆಸ್ತಿಗಳನ್ನು ತನ್ನ ಪತ್ನಿಯ ಹೆಸರಿಗೆ ವರ್ಗಾವಣೆ ಮಾಡಿರುವ ಬಗ್ಗೆ ನನಗೆ ಗೊತ್ತಿಲ್ಲ. ದಾವಾ ಬಿ ಶೆಡ್ಯೂಲನ 5 ನೇ ಆಸ್ತಿಯನ್ನು 3 ನೇ ಪ್ರತಿವಾದಿಯು ತನ್ನ ಪತ್ನಿಯ ಹೆಸರಿಗೆ ಬಿಡುಗಡೆ ಪತ್ರ ಮಾಡಿಕೊಟ್ಟಿದ್ದಾರೆ ಎಂದರೆ ಗೊತ್ತಿಲ್ಲ. ಅದಕ್ಕೆ ಸಂಬಂಧಪಟ್ಟಂತೆ ಹೀರೂರು ಗ್ರಾಮ ಪಂಚಾಯತಿಯ ಉತಾರೆಯನ್ನು ಹಾಜರುಪಡಿಸಿಲ್ಲ. ಹೀರೂರು ಗ್ರಾಮದಲ್ಲಿ 1 ಗುಂಟೆ ಜಮೀನಿನ ಬೆಲೆ ಗೊತ್ತಿಲ್ಲ. ಹೀರೂರು ಗ್ರಾಮದಲ್ಲಿ 1 ಗುಂಟೆ ಜಮೀನಿನ ಬೆಲೆ ಕೇವಲ ರೂ.1,00,000-00 ಎಂದರೆ ಸರಿಯಲ್ಲ. ದಾವಾ ಆಸ್ತಿಗಳು ರೂ.50,00,000-00 ಬೆಲೆ

ಬಾಳುತ್ತವೆ ಎಂದು ದಾವೆಯಲ್ಲಿ ಸುಳ್ಳು ಬರೆಯಿಸಿದ್ದೇನೆ ಎಂದರೆ ಸರಿಯಲ್ಲ. ದಾವಾ ಆಸ್ತಿಗಳಲ್ಲಿ ನಾನು ಮತ್ತು ನನ್ನ ಸಹೋದರಿಯರು **5/11** ನೇ ಅಂಶದ ಹಿಸ್ಸೆಯನ್ನು ಪಡೆಯಲು ಅರ್ಹರಲ್ಲ ಎಂದರೆ ಸರಿಯಲ್ಲ. **1** ರಿಂದ **3** ನೇ ಪ್ರತಿವಾದಿಯರು ದಾವಾ ಆಸ್ತಿಗಳ ಸಂಪೂರ್ಣ ಮಾಲೀಕರಾಗಿದ್ದರೂ ಸಹ ಸುಳ್ಳು ದಾವೆ ಮಾಡಿದ್ದೇವೆ ಎಂದರೆ ಸರಿಯಲ್ಲ.

: ಮರುವಿಚಾರಣೆ : ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ನ. ಸ. ಓ. ಹೇ. ಕೆ ಸರಿ ಇದೆ
ಎಂದು ಒಪ್ಪಿರುತ್ತಾರೆ.

**Sd/-**
ಹಿರಿಯ ಸಿವಿಲ್ ನ್ಯಾಯಾಧೀಶರು
ಹಾನಗಲ್